ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

<u>ಸಿ.ಸಿ ನಂ:</u> **<u>850/2017</u>**

| | | |
|---|---|---|
| ಸಾಕ್ಷಿಯ ಹೆಸರು: | ಪುಷ್ಪಾ | ಪ್ರಾಸಾ: 1 |
| ಗಂಡನ/ತಂದೆಯ ಹೆಸರು: | ನಿತ್ಯಾನಂದ | ಚಾಸಾ: 1 |
| ವಯಸ್ಸು: | 34 ವರ್ಷ | ದಿ: 12-02-2026 |
| ಉದ್ಯೋಗ: | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳ: | ಮುದ್ನಾಳ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :</u>

ಚಾಸಾ: 4 ನನ್ನ ತಂದೆ. ಚಾಸಾ: 5 ನನ್ನ ತಾಯಿ. ಚಾಸಾ: 6 ನನ್ನ ಅಣ್ಣ. ಚಾಸಾ: 7 ನನ್ನ ದೊಡ್ಡಮ್ಮ. ನನಗೆ ಚಾಸಾ: 8 ರಿಂದ 10 ರವರ ಪರಿಚಯವಿದೆ. ಆರೋಪಿ ನಂಬರ 1 ನನ್ನ ಗಂಡ. ಆರೋಪಿ ನಂಬರ 2 ನನ್ನ ಅತ್ತೆ. ಆರೋಪಿ ನಂಬರ 3 ನನ್ನ ಭಾವ. ಆರೋಪಿ ನಂಬರ 4 ನನ್ನ ನೆಗೆಣಿ. 5 ರಿಂದ 9 ರವರ ಪರಿಚಯವಿದೆ. ನನ್ನ ಮದುವೆ 12 ವರ್ಷದ ಹಿಂದೆ ಆಗಿರುತ್ತದೆ. ಸದರಿ ಆರೋಪಿ ನಂಬರ 1 ರಿಂದ 8 ಮತ್ತು ಸಾಬಣ್ಣ ಇವರು ನಮ್ಮ ಮನೆಗೆ ನನ್ನನ್ನು ನೋಡಲು ಬಂದಿರುತ್ತಾರೆ. ಸದರಿ ಆರೋಪಿ ನಂಬರ 1 ರವರಿಗೆ 50 ರಿಂದ 60 ಸಾವಿರ ರೂ ಸಂಬಳವಿದ್ದು ಮತ್ತು ಜಮೀನುಗಳು ಇರುವುದರಿಂದ ನನ್ನ ತಂದೆ ಹೋಗಿ ಕೊಂಕಲ್ ದಲ್ಲಿ ನೋಡಿ ಬಂದಿರುತ್ತಾರೆ. ದಿನಾಂಕ: 06-05-2013 ರಂದು ತೋರಣತಿಪ್ಪ ಗ್ರಾಮದ ಆದಿ ನಾರಾಯಣ ದೇವಾಲಯದಲ್ಲಿ ಮದುವೆಯಾಗಿರುತ್ತದೆ. ಮದುವೆಯ ಸಮಯದಲ್ಲಿ 11 ತೊಲ ಬಂಗಾರ, 1 ಲಕ್ಷ ರೂ. ನೀಡಿರುತ್ತಾರೆ.

2. ನಾನು ಮತ್ತು ಆರೋಪಿ ನಂಬರ 1 ರವರು ಮದುವೆಯಾದ ನಂತರ ಸ್ವಲ್ಪ ದಿನಗಳ ಕಾಲ ಕೊಂಕಲ್ ಗ್ರಾಮದಲ್ಲಿ ಇದ್ದೇವು. ಆರೋಪಿ ನಂಬರ 1 ರವರು ನನಗೆ ಮುಂಬೈಯಲ್ಲಿ ನನ್ನ ಕೆಲಸ ಇರುತ್ತದೆ ಆದ್ದರಿಂದ ಹೋಗೋಣ ಎಂದು ಹೇಳಿರುತ್ತಾನೆ. ಸದರಿ ಮುಂಬೈಯಲ್ಲಿ ಆರೋಪಿ ನಂಬರ 1 ಯಾವುದೇ ಕೆಲಸ ಮಾಡುತ್ತಿರಲಿಲ್ಲ ಆದರೆ ಜಿಮ್ ನಲ್ಲಿ ಸಣ್ಣ ಕೆಲಸ ಮಾಡುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಮದುವೆಯ ಮುಂಚೆ ಆರೋಪಿ ನಂಬರ 1 ರವರಿಗೆ 9 ನೇ ಆರೋಪಿತಳ ಜೊತೆಗೆ ಅನೈತಿಕ ಸಂಬಂಧವಿರುತ್ತದೆ ಎಂದು ಗೊತ್ತಾಗಿರುತ್ತದೆ. ನಾನು ಸದರಿ ವಿಷಯವನ್ನು 1 ನೇ ಆರೋಪಿಗೆ ಕೇಳಿದಾಗ, ಆರೋಪಿ ನಂಬರ 1 ರವರು 9 ನೇ ಆರೋಪಿತಳ ಮಾತು ಕೇಳಿ ನನಗೆ ಹೊಡೆ-ಬಡೆ ಮಾಡಿರುತ್ತಾರೆ. ಆರೋಪಿತರು ಎಲ್ಲರೂ ನನಗೆ ನೀನು ಚೆನ್ನಾಗಿರುವುದಿಲ್ಲ ಎಂದು ನನಗೆ ಹೊಡೆ-ಬಡೆ

ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ಕಡಿಚಿಗೆಯಿಂದ ನನ್ನ ಕೈಯನ್ನು ಸುಟ್ಟಿರುತ್ತಾರೆ. ಸದರಿ ಆದರೂ ಕೂಡ ಸಂಸಾರ ಮಾಡುವ ಇಚ್ಛೆಯಿಂದ ನಾನು ಸುಮ್ಮನೆ ಇರುತ್ತೇನೆ.

3. ಸದರಿ ಆರೋಪಿತರು ಎಲ್ಲರೂ ಹೊಸ ಜಿಮ್ ಪ್ರಾರಂಭ ಮಾಡಲು 7 ಲಕ್ಷ ರೂ. ಬೇಕಾಗುತ್ತದೆ ಎಂದು ನನಗೆ 5 ಲಕ್ಷ ರೂ. ಮನೆಯಿಂದ ತೆಗೆದುಕೊಂಡು ಬಾ ಎಂದು ಹೇಳಿರುತ್ತಾರೆ. ನನ್ನ ತಂದೆ 5 ಲಕ್ಷ ರೂ. ನೀಡಲು ಆಗುವುದಿಲ್ಲ ಏಕೆಂದರೆ ಸಾಲ ಮಾಡಿ ಮದುವೆ ಮಾಡಿರುತ್ತಾರೆ ಎಂದು ಹೇಳುತ್ತೇನೆ. ಸದರಿ ಆರೋಪಿತರು ಎಲ್ಲರೂ ನನಗೆ ಹೊಡೆ-ಬಡೆ ಮಾಡಿ ಕಿರುಕುಳ ನೀಡಿರುತ್ತಾರೆ. ನಾನು ಈ ವಿಷಯವನ್ನು ನನ್ನ ತಂದೆಗೆ ತಿಳಿಸಿ, ನನ್ನ ತಂದೆ ಸಾಲ ಮಾಡಿ ಮದುವೆ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ. ನನ್ನ ತಂದೆ ಕೊನೆಗೆ 2 ಲಕ್ಷ ರೂ. ತಂದು ಕೊಟ್ಟಿರುತ್ತಾರೆ. ಆರೋಪಿತರು 2 ತಿಂಗಳ ಕಾಲ ಸುಮ್ಮನೆ ಇರುತ್ತಾರೆ. ಮರಳಿ 3 ಲಕ್ಷ ರೂ. ಬೇಕು ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. ಸದರಿ ಮುಂಬೈಯಿಂದ ಕೊಂಕಲ್ ಗ್ರಾಮಕ್ಕೆ ನಾನು ಮತ್ತು 1 ನೇ ಆರೋಪಿತನು ಬಂದಿರುತ್ತೇವೆ. 2 ದಿನಗಳ ಕಾಲ ಪೂಜೆ ಮಾಡಿರುತ್ತೇವೆ. 1 ನೇ ಆರೋಪಿತನು ನನಗೆ ಮುದ್ನಾಳ ಗ್ರಾಮಕ್ಕೆ ತಂದು ಬಿಟ್ಟು ಹೋಗಿರುತ್ತಾನೆ. ಉಳಿದ ಹಣ ತರಲಿಲ್ಲ ಎಂದರೆ ಮುಂಬೈಗೆ ಬರಬೇಡ ಎಂದು ಹೇಳಿರುತ್ತಾರೆ. ಎಲ್ಲರೂ ಮುದ್ನಾಳ ಗ್ರಾಮಕ್ಕೆ ಬಂದು ಹಣ ಕೇಳಿದಾಗ, ನಾನು ಇಲ್ಲ ಎಂದು ಹೇಳಿದಾಗ ಆರೋಪಿತರು ಎಲ್ಲರೂ ಸೇರಿ ನನಗೆ ಕಪಾಳಕ್ಕೆ ಹೊಡೆದಿರುತ್ತಾರೆ ಆದ್ದರಿಂದ ನಾನು ಕೆಳಗೆ ಬಿದ್ದಿರುತ್ತೇನೆ. ಚಾಸಾಃ 7 ರವರು ಬಂದ ನಂತರ ಆರೊಪಿತರು ಎಲ್ಲರೂ ಬಿಟ್ಟು ಹೋಗಿರುತ್ತಾರೆ. ನಾನು ನಂತರ ಪೊಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

4. ಸದರಿ ನಾವು ಮೊದಲು ಪ್ರಕರಣವನ್ನು ಗುರುಮಿಠಕಲ ಠಾಣೆಗೆ ಹಾಕಿರುತ್ತೇವೆ. ಸದರಿ 15 ದಿನಗಳಲ್ಲಿ ದಿನಾಂಕಃ 27-07-2015 ರಂದು ಮದ್ಯಾಹ್ನ 2.30 ಗಂಟೆ ಸುಮಾರಿಗೆ ಆರೋಪಿ ನಂಬರ 1, 3, 5, 8 ರವರು ನಮ್ಮ ಮನೆಗೆ ಬಂದು ನನಗೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರಿ ಅಧಿಕಾರ ವ್ಯಾಪ್ತಿ ಯಾದಗಿರಿ ಗ್ರಾಮೀಣ ಪೊಲಿಸ ಠಾಣೆಗೆ ಬಂದಿರುತ್ತದೆ ಎಂದು ಹೇಳಿದಾಗ ಸದರಿ ದೂರು ಯಾದಗಿರಿ (ಗ್ರಾ) ಠಾಣೆಗೆ ವರ್ಗಾವಣೆ ಮಾಡಿರುತ್ತಾರೆ. ಸದರಿ ದಿನಾಂಕಃ 27-07-2015 ರಂದು ನನಗೆ ಹೊಡೆದಿದ್ದರಿಂದ ನಾನು ಆರೋಪಿತರ ವಿರುದ್ಧ ಮತ್ತೊಂದು ಪ್ರಕರಣವನ್ನು ದಾಖಲಿಸಿರುತ್ತೇವೆ. ಸದರಿ ಪೊಲಿಸರು ಮುದ್ನಾಳ ಗ್ರಾಮಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ನಾನು ಘಟನೆಯ ಕುರಿತು ಪೊಲಿಸರಿಗೆ ಹೇಳಿರುತ್ತೇನೆ. ನಾನು ಸಹಿ ಹಾಕಿರುತ್ತೇನೆ. ನಾನು ಮರು ಹೇಳಿಕೆಯನ್ನು ನೀಡಿರುತ್ತೇನೆ ಜೊತೆಗೆ ಮದುವೆಯ ಫೊಟೋ ಮತ್ತು ಆಮಂತ್ರಣ ಪತ್ರಿಕೆಯನ್ನು ನೀಡಿರುತ್ತೇನೆ. ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು

ನಿಪಿ1(ಎ) ಎಂದು ಗುರುತಿಸಲಾಯಿತು. ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ-2, ಮದುವೆಯ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

ದಿನಾಂಕಃ 29-07-2015 ರಂದು ಆರೋಪಿತರು ನನಗೆ ಮತ್ತೆ ಬಂದು ಹೊಡೆದಾಗ ನಾನು ಯಾದಗಿರಿ (ಗ್ರಾ) ಪೊಲೀಸ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ ಪ್ರಕರಣ ದಾಖಲಾಗಿರುತ್ತದೆ. ನನಗೆ ಆರೋಪಿತರು ರೆಲ್ವೆ ಹಳಿಯ ಮೇಲೆ ಹಾಕಿ ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ.

ಪಾಟಿ ಸವಾಲು ಃಆರೋಪಿ ಪರ ಶ್ರೀ ಎಚ್**,** ಎಮ್ ಪಿ ವಕೀಲರಿಂದಃ

**1.** ಆರೋಪಿ ನಂಬರ 1 ರವರ ಜೊತೆ ಮದುವೆಯು ಹೊಸ ಸಂಬಂಧವಿರುತ್ತದೆ. ಜನವರಿ 2013 ರಂದು ನನ್ನ ನಿಶ್ಚಿತಾರ್ಥ ಆಗಿರುತ್ತದೆ ಎಂದರೆ ಸರಿ. ನಿಶ್ಚಿತಾರ್ಥದಿಂದ ಮದುವೆಯಾಗುವವರೆಗೆ ನಾನು ಆರೋಪಿ ನಂಬರ 1 ರವರು ಫೋನು ಮುಖಾಂತರ ಮಾತಾಡುತ್ತಿದ್ದೇವು ಎಂದರೆ ಸರಿ. ಸದರಿ ಆರೋಪಿ ನಂಬರ 1 ರವರ ಮುಂಬೈಯಲ್ಲಿರುವ ಮನೆ ಮತ್ತು ಕೊಂಕಲ್ ಆಸ್ತಿಗಳ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ಸದರಿ ಸದರಿ ಆರೋಪಿ ನಂಬರ 1 ರವರ ಹಿನ್ನೆಲೆ ತಿಳಿದುಕೊಂಡು ನನ್ನ ಮದುವೆ ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ನಂಬರ 3 ಮತ್ತು 4 ರವರು ಕೊಂಕಲ್ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಮುಂಬೈಗೂ ಬರುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ನಂಬರ 5 ಮತ್ತು 6 ರವರು ಹೊನಗೇರಾ ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದಮರೆದು ಮುಂಬೈಗೂ ಕೂಡ ಬರುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಆರೋಪಿ ನಂಬರ 7 ಮತ್ತು 8 ರವರು ಗಣಪೂರ ಗ್ರಾಮದವರು ಆದರೆ ಮುಂಬೈಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿ ನಂಬರ 7 ಮತ್ತು 8 ರವರು ಮುಂಬೈ ನಗರದ ಸಾಯಿನ್ ನಲ್ಲಿ ಇರುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಕಡೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿತರ ಕಡೆಯಿಂದ ಮದುವೆಯಾಗಿರುತ್ತದೆ ಎಂದರೆ ಸರಿ. ಸದರಿ ಈ ಪ್ರಸ್ತುತ ಪ್ರಕರಣ ದಾಖಲಿಸುವುದಕ್ಕಿಂತ ಮುಂಚೆ ಆರೋಪಿ ನಂಬರ 1, 3, 5, 8 ರವರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸಾಕ್ಷಿಯು ಈ ಪ್ರಸ್ತುತ ಪ್ರಕರಣ ದಾಖಲಿಸಿದ ನಂತರ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ಜುಲೈ 2015 ರಲ್ಲಿ ಸಲ್ಲಿಸಿರುತ್ತೇನೆ ಆದರೆ ದಿನಾಂಕ ನೆನಪಿಲ್ಲ. ಸದರಿ ಈ ಪ್ರಕರಣಕ್ಕಿಂತ ಮುಂಚೆ ದಿನಾಂಕಃ 29-07-2015 ರಂದು ಗ್ರಾಮೀಣ ಪೊಲೀಸ ಠಾಣೆಯಲ್ಲಿ

ಕ್ರೈಮ್ ನಂಬರ 187/2015 ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಗೆ ಕ್ರೈಮ್ ನಂಬರ 187/2015 ರ ಫಿರ್ಯಾದಿಯನ್ನು ತೋರಿಸಿ ದಿನಾಂಕವನ್ನು ಗುರುತಿಸಿರುವುದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಈ ಪ್ರಕರಣವನ್ನು ನಾನು ದಿನಾಂಕಃ 31-07-2015 ರಂದು ನೀಡಿರುತ್ತೇನೆ ಎಂದರೆ ಸಾಕ್ಷಿಯು ಈ ಪ್ರಕರಣವು ಮೊದಲು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ದಿನಾಂಕಃ 31-07-2015 ರಂದು ಇರುವುದನ್ನು ಸಾಕ್ಷಿಯು ಒಪ್ಪಿರುತ್ತಾರೆ.

2. ಸದರಿ ಈ ಪ್ರಕರಣದಲ್ಲಿ ಮತ್ತು ಕೈಮ್ ನಂಬರ 187/2015 ರಲ್ಲಿ ಇರುವ ಸಾಕ್ಷಿದಾರರು ಒಂದೇ ಇರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಣ್ಣ ಸಂತೋಷ ಇರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾಃ 6 ನನ್ನ ಅಣ್ಣ. ಕೈಮ್ ನಂಬರ 187/2015 (ಎಸ್. ಸಿ ನಂಬರ 2/2016) ರಲ್ಲಿ ನನ್ನ ಅಣ್ಣ ಚಾಸಾಃ 9 ರವರಿಗೆ ಅಭಿಯೋಜನೆಯವರು ಪ್ರಾಸಾಃ 7 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ ಅದರಲ್ಲಿ ದಿನಾಂಕಃ 12-07-2018 ರಲ್ಲಿ ಸಾಕ್ಷಿ ನೀಡಿರುತ್ತಾನೆ ಎಂದರೆ ಸರಿ. ಸದರಿ ಸಾಕ್ಷಿಯು ದಾಖಲಾತಿಯನ್ನು ಗುರುಸಿರುವುದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಡಾಕ್ಟರ ನಾಗಣ್ಣ ನನ್ನ ದೊಡ್ಡಪ್ಪ. ಯಾದಗಿರಿ ನಗರದ ಶಿವನಗರದಲ್ಲಿ ನಾಗಣ್ಣ ಇವರ ಆಸ್ಪತ್ರೆ ಇದೆ ಎಂದರೆ ಸರಿ. ಎಸ್, ಸಿ ನಂಬರ 2/2016 ರಲ್ಲಿ ನನ್ನ ದೊಡ್ಡಪ್ಪನ ಕಡೆಯಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನನ್ನ ದೊಡ್ಡಪ್ಪ ದಿನಾಂಕಃ 01-04-2019 ರಂದು ನನ್ನ ಪರವಾಗಿ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿ. ಸದರಿ ನಾವು ಶಿವನಗರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಟ್ಟಿರುತ್ತೇವೆ ಎಂದರೆ ಸರಿ. ಸದರಿ ನಾಗಣ್ಣ ಇವರು ಸಾಕ್ಷ್ಯವನ್ನು ನಿಡಿ-3 ಎಂದು ಗುರುತಿಸಲಾಯಿತು.

3. ಸದರಿ 1 ನೇ ಆರೋಪಿತನು ನನಗೆ ಕಾನೂನು ತಿಳುವಳಿಕೆ ನೋಟಿಸು ನೀಡಿದ್ದನು ಎಂದರೆ ಸರಿ. ಸದರಿ ನನ್ನ ಉತ್ತರ ನೋಟಿಸಿನಲ್ಲಿ 15 ದಿನಗಳಲ್ಲಿ ಕರೆದುಕೊಂಡು ಹೋಗದಿದ್ದರೆ ಕ್ರಿಮಿನಲ್ ಕೇಸ್ ದಾಖಲಿಸುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎಸ್. ಸಿ ನಂಬರ 2/2016 ರಲ್ಲಿ ಆರೋಪಿತರ ವಿರುದ್ದ ಕ್ರಿಮಿನಲ್ ಕೆಸ್ ದಾಖಲಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

4. ಮದುವೆಯಾಗುವುದಕ್ಕಿಂತ ಮುಂಚೆ 2-3 ತಿಂಗಳುಗಳ ಕಾಲ ಚೆನ್ನಾಗಿ ಮಾತಾಡುತ್ತಿದ್ದೇವು ಎಂದರೆ ಸರಿ. ಸದರಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಒತ್ತಾಯದ ಮೇರೆಗೆ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯು ನೋಟಿಸನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಡಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಡಿ-4(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಆರೋಪಿತನು ಕಳಿಸಿರುವ ನೋಟಿಸಿನಲ್ಲಿ ನಾನು ಹುಚ್ಚಿ ಇರುತ್ತೇನೆ ಎಂದು ಹೇಳಿದ್ದರಿಂದ ನಾವು ಈ ರೀತಿ ನೋಟಿಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತನು ನನಗೆ ದೈಹಿಕವಾಗಿ ತೊಂದರೆ ಇರುತ್ತದೆ ಎಂದು ಆಸ್ಪತ್ರೆಗೆ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಮಕ್ಕಳು ಆಗಿರುವುದಿಲ್ಲ ಆದ್ದರಿಂದ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಾನು ಆರೋಪಿ ನಂಬರ 1 ರವರ ಜೊತೆಗೆ ದೈಹಿಕವಾಗಿ ಸಂಪರ್ಕ ಬೆಳೆಸಲು ನನಗೆ ಆರಾಮಿವಿಲ್ಲದ ಕಾರಣ ವಿರೋಧ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ 6 ತಿಂಗಳ ಕಾಲ ಮಾತ್ರ ಸಂಸಾರ ಮಾಡಿ ತಮರ ಮನೆಗೆ ಬಂದು ಮರಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿತನು ನನಗೆ ಸಂಸಾರ ಮಾಡಲು ಬರಲು ನೋಟಿಸು ನೀಡಿದ್ದರು ಎಂದರೆ ಸರಿ. ಸದರಿ ನನ್ನ ತಂದೆ-ತಾಯಿ ಜೊತೆಯಾಗಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಿಂತ ಮುಂಚೆ ನ್ಯಾಯಪಂಚಾಯತಿ ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ನನ್ನ ತಂದೆ-ತಾಯಿ ಮತ್ತು ಇತರರು 1 ಕೋಟಿ ರೂ. ಬೇಡಿಕೆ ಇಟ್ಟು ಒಂದು ವೇಳೆ ಕೊಡಲಿಲ್ಲ ಎಂದರೆ ಕೇಸ್ ಹಾಕುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಹಣ ಕೊಡಲು ನಿರಾಕರಿಸಿದ್ದರಿಂದ ಮತ್ತು ನನ್ನ ಜೊತೆ ಸಂಸಾರ ಮಾಡಲು ತಯಾರು ಇರುತ್ತಾನೆ ಎಂದು ಹೇಳಿದ್ದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಾನು ಜೀವನಾಂಶಕ್ಕಾಗಿ 1 ನೇ ಆರೋಪಿತನು ಮತ್ತು ಅವರ ತಾಯಿ ಮತ್ತು ಸಹೋದರನ ವಿರುದ್ಧ ದಾವೆ ಸಲ್ಲಿಸಿದ್ದನೆ ಎಂದರೆ ಸರಿ.

5. ನನ್ನ ತಂದೆ-ತಾಯಿ, ಡಾಕ್ಟರ, ಮತ್ತು ನನಗೆ ಬೇಕಾಗಿರುವ ಸಾಕ್ಷಿದಾರನ ಜೊತೆಯಾಗಿ ಈ 2 ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಮದುವೆಯಾದ ನಂತರ ನನಗೆ ಹೊಡೆ-ಬಡೆ ಮಾಡುತ್ತಿದ್ದ, 9 ನೇ ಆರೋಪಿತಳ ಜೊತೆ ಅನೈತೀಕ ಸಂಬಂಧ ಹೊಂದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 9 ನೇ ಆರೋಪಿತಳು ಯಾರು ಇರುತ್ತಾಳೆ ಎಂದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾಳೆ. ಆರೋಪಿತರು ಎಲ್ಲರೂ ನಾನು ಮನೆಯಲ್ಲಿರುವ ನನಗೆ ಹೊಡೆ-ಬಡೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಹೆಚ್ಚುವರಿಯಾಗಿ ಹಣ ಕೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮದುವೆಯ ಸಮಯದಲ್ಲಿ 2 ನೇ ಆರೋಪಿತಳು ನನಗೆ 4 ವರೆ ತೊಲೆ ಬಂಗಾರ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ಬಂಗಾರವನ್ನು ನಾನು ಮನೆಗೆ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಮಂಗಳ ಸೂತ್ರವನ್ನು ನನ್ನ ತಂದೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಯಾವುದೇ ವರದಕ್ಷಿಣೆ ಇಲ್ಲದೆ ಮದುವೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಾನು ದೂರು ನೀಡಿದ ನಂತರ ಪೊಲಿಸರು ಪಂಚನಾಮೆ ಮಾಡಿರುತ್ತಾರೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **850/2017**

| | | |
|---|---|---|
| ಸಾಕ್ಷಿಯ ಹೆಸರುಃ | ಭೀಮರೆಡ್ಡಿ | ಪ್ರಾಸಾಃ 2 |
| ತಂದೆ/ಗಂಡನ ಹೆಸರುಃ | ಶರಣಗೌಡ | ಚಾಸಾಃ 2 |
| ವಯಸ್ಸು ಃ | 41 ವರ್ಷ | ದಿಃ 12-02-2026 |
| ಉದ್ಯೋಗಃ | ಪಂಪಆಪರೇಟರ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 3 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ದಿನಾಂಕಃ 03-08-2015 ರಂದು ನಾನು ಮತ್ತು ಸಾಬಣ್ಣ ಇವರು ಹಣಮಂತ ದೇವರ ಗುಡಿಯಲ್ಲಿ ಮಾತನಾಡುತ್ತಾ ಕುಳಿತಿರುವಾಗ ಪೊಲಿಸರು ಬಂದು ಪಂಚನಾಮೆಗೆ ಸಹಕರಿಸಲು ಕೇಳಿರುತ್ತಾರೆ. ಸದರಿ ಪೊಲಿಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಾನು ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಸದರಿ ಚಾಸಾಃ 1 ರವರ ಮನೆಯಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯು 5.00 ರಿಂದ 6.00 ಗಂಟೆಯವರೆಗೆ ಆಗಿರುತ್ತದೆ. ಸಾಕ್ಷಿಗೆ ಒಂದು ದಾಖಲಾತಿಯನಮ್ನು ತೋರಿಸಲಾಗಿ ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-4 ಎಂದು, ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ ಎಚ್, ಎಮ್. ಪಿ ಇವರಿಂದ

1. ಚಾಸಾಃ 6 ಮತ್ತು ನಾನು ಆಪ್ತರು ಎಂದರೆ ಸರಿ. ಹಣಮಂತ ದೇವರ ಗುಡಿಯ ಹತ್ತಿರ ಬಹಳಷ್ಟು ಜನರು ಇದ್ದರು ಎಂದರೆ ಸರಿ. ನನಗೆ ಪೊಲಿಸರು ನೋಟಿಸು ನೀಡಿರುವುದಿಲ್ಲ. ಸದರಿ ದಿನಾಂಕಃ 03-08-2015 ರಂದು ಸಂಜೆಃ 5.00 ರಂದ 6.00 ಗಂಟೆಯವರೆಗೆ ನಮ್ಮಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲಿಸರ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ 1 ಮತ್ತು 6 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **850/2017**

| | | |
|---|---|---|
| ಸಾಕ್ಷಿಯ ಹೆಸರುಃ | ಸಾಬಣ್ಣ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಶರಣಪ್ಪ | ಚಾಸಾಃ 3 |
| ವಯಸ್ಸು ಃ | 37 ವರ್ಷ | ದಿಃ 12-02-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 2 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ಸುಮಾರು 11 ವರ್ಷಗಳ ಹಿಂದೆ ದಿನಾಂಕಃ 03-08-2015 ರಂದು 4.30 ಗಂಟೆ ಸುಮಾರಿಗೆ ನಾನು ಹಣಮಂತ ದೇವರ ಗುಡಿಯ ಹತ್ತಿರ ನಾನು ಮತ್ತು ಚಾಸಾಃ 2 ರವರು ನಿಂತಿರುವಾಗ, ಪೊಲಿಸರು ಬಂದು ಪಂಚನಾಮೆಗೆ ಸಹಕರಿಸಲು ಕೇಳಿರುತ್ತಾರೆ. ಪೊಲಿಸರು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾಃ 1 ರವರು ಜಗಳ ಮಾಡಿರುವುದನ್ನು ಪೊಲಿಸರಿಗೆ ತೋರಿಸಿರುತ್ತಾರೆ. ಪೊಲಿಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆ ಸುಮಾರು 4.30 ರಿಂದ 6.00 ಗಂಟೆಯವರೆಗೆ ಆಗಿರುತ್ತದೆ. ಪಂಚನಾಮೆಯನ್ನು ನನಗೆ ಓದಿ ಹೇಳಿರುತ್ತಾರೆ. ಪೊಲಿಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿ ಚಕಬಂದಿಯನ್ನು ಬರೆಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 22-09-2015 ರಂದು ಸಾಯಂಕಾಲ 5.30 ಗಂಟೆ ಸುಮಾರಿಗೆ ಮದುವೆ ಪತ್ರ, ಪೊಟೋ ತೆಗೆದುಕೊಂಡಿರುತ್ತಾರೆ ನಾನು ಮತ್ತು ಚಾಸಾಃ 10 ರವರು ಸಹಿ ಮಾಡಿರುತ್ತೇವೆ. ಸದರಿ ಪಂಚನಾಮೆಯನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಿಂದ ನಿಪಿ-4 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ ಎಚ್, ಎಮ್. ಪಿ ಇವರಿಂದ

1. 22-09-2015 ರಂದು ಚಾಸಾಃ 10 ರವರು ಲಗ್ನ ಪತ್ರಿಕೆ ಮತ್ತು ಫೊಟೋಗಳನ್ನು ಕೊಟ್ಟಿರುತ್ತಾರೆ. ಪೊಲಿಸರು ಜಪ್ತಿ ಪಂಚನಾಮೆಯನ್ನು ಯಾವ ರೀತಿ ಮಾಡಿರುತ್ತಾರೆ ಎಂದರೆ

ಸಾಕ್ಷಿಯು ನಾವು ಕೊಟ್ಟಿರುತ್ತೇವೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾಃ 6 ಮತ್ತು ನಾನು ಸ್ನೇಹಿತರು ಎಂದರೆ ಸರಿಯಲ್ಲ. ನನಗೆ ಪಂಚನಾಮೆಗೆ ಬರಲು ನೋಟಿಸು ನೀಡಿರುವುದಿಲ್ಲ. ದಿನಾಂಕಃ 03-08-2015 ರಂದು ನನ್ನ ಮತ್ತು ಚಾಸಾಃ 2 ರವರ ಸಮಕ್ಷಮದಲ್ಲಿ ನಿಪಿ-4 ನ್ನು ಜರುಗಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 22-09-2015 ರಂದು ನಮ್ಮ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ಮತ್ತು 6 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ